# ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

ವಿಷಯದ ಸಂಖ್ಯೆ:216/08–09

Regularization of unauthorized development or construction refund of regularization fee-regarding.

ಪ್ರಸ್ತಾವನೆ:

The Government had issued notification to commence the scheme of Regularization of unauthorized development or construction during October 2007. The last date for filing the application was 14th December 2007. However, the scheme was challenged through several PILs before the Hon'ble High Court of Karnataka and consequent upon the undertaking given by the Advocate General at the Hon'ble High Court, certain amendments to the Rules made and the draft Rules were published calling for objections from the general public. The last date for filing the objection was over on 26th March 2007. It is understood that over 50,000 objections have been received and to tabulate the objections may take some time. With the amended Rules it may become necessary to change the application format to accommodate the proposed changed Rules. Secondly, a new government would be in place by the end of the month and the legislators may take up the matter of regularization afresh. This may further delay the final notification of the Rules.

In the meantime, we have been receiving several applications seeking for refund of the regularization fee paid. Several applicants have informed that they have borrowed money at high interest rates and hence, if the regularization is delayed they would be put into heavy financial loses.

Considering the request of several applicants and fact that the final notification of the Rules would take some more time and also that a new application form may be re-formatted to accommodate the changes in the rules, it is for consideration to permit refund of the fee paid to those applicants who have sought refund from us.

The proposel of Commissioner of Dated:20/05/2008 is placed before the Administrator for approval.

ತೀರ್ಮಾನ:Commissioner Note, Dated:20/05/2008 is approved

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:221/2008-09**

ವಾರ್ಡ್:60 ರ ಜಯನಗರ ವಾಣಿಜ್ಯ ಸಂಕೀರ್ಣಕ್ಕೆ ಲಿಫ್ಟ್‌ಗಳನ್ನು ಅಳವಡಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ವಾರ್ಡ್:60 ರ ಜಯನಗರ ವಾಣಿಜ್ಯ ಸಂಕೀರ್ಣಕ್ಕೆ ಲಿಫ್ಟ್‌ಗಳನ್ನು ಅಳವಡಿಸುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರು ಎರಡನೇ ಕರೆಯಲ್ಲಿ ಟಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 04 ಟೆಂಡರ್‌ಗಳು ಸ್ವೀಕೃತವಾಗಿದ್ದು, ತಾಂತ್ರಿಕ ಬಿಡ್‌ನಲ್ಲಿ 02 (ಎರಡು) ಟೆಂಡರ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರು ಕನಿಷ್ಠ ಟೆಂಡರ್‌ದಾರ ಸಂಸ್ಥೆಯಾದ ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ರವರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.90.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಯನ್ನು ಕೊಟೇಷನ್ ಆಧಾರದ ಮೇಲೆ ತಯಾರಿಸಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.88,24,000.00 ಮಂಜೂರಾದ ದರಗಳಿಗೆ ಗುತ್ತಿಗೆದಾರ ಸಂಸ್ಥೆಯಾದ ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ರವರು ಶೇಕಡ 14.36% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ.

ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯವರು ಟೆಂಡರ್ ಕರಾರಿನಂತೆ ಎಲ್ಲಾವು ಹೊಸದಾಗಿ ಅಳವಡಿಸಲು ಒಟ್ಟು ಬಿಡ್ ಮೊತ್ತ ರೂ.1,11,99,200.00 ಗಳನ್ನು ನಮೂದಿಸಿದ್ದು, ಹಾಲಿ ಇರುವ ಕಾರ್ ಗೈಡ್ ರೈಲ್ಸ್, ಬ್ರಾಕೆಟ್ಸ್, ಕೌಂಟರ್ ವೈಟ್ ಫ್ರೇಮ್ ಮತ್ತು ಫಿಲ್ಲರ್ ವೇಟ್ಸ್ ಇವುಗಳನ್ನು ಮೂರು ಲಿಫ್ಟ್‌ಗಳಿಗೆ ಅಳವಡಿಸುವುದರಿಂದ ಒಟ್ಟು ರೂ.11,07,200.00 ಗಳನ್ನು ಉಳಿತಾಯ ಮಾಡಬಹುದಾಗಿರುತ್ತದೆ. ಸದರಿ ಸಾಮಗ್ರಿಗಳನ್ನು ಮರು ಉಪಯೋಗಿಸುವುದರಿಂದ ಯಾವುದೇ ತೊಂದರೆ ಇಲ್ಲವೆಂದು ಮತ್ತು ಹೊಸ ಲಿಫ್ಟ್‌ಗಳನ್ನು ಗತಕಾಲಕವರೆಗೂ ಉಪಯೋಗಿಸಬಹುದೆಂದು ಸದರಿ ಸಂಸ್ಥೆಯವರು ಭರವಸೆ ಪತ್ರವನ್ನು ನೀಡಿರುತ್ತಾರೆ. ಹಾಲಿ ಇರುವ ಕಾರ್ ಗೈಡ್ ರೈಲ್ಸ್ ಈಗಾಗಲೇ ಉಪಯೋಗಿಸಿರುವುದರಿಂದ ಇವು ತುಂಬ ಮೃದುವಾಗಿದ್ದು ಲಿಫ್ಟ್‌ಗಳು ಇದರ ಮೇಲೆ ಓಡಾಡಲು ತುಂಬ ಮೃದುಭಾವನೆ ನೀಡುವುದೆಂದು ತಿಳಿಸಿರುತ್ತಾರೆ. ಹಾಲಿ ಇರುವ ಕಾರ್ ಗೈಡ್ ರೈಲ್ಸ್ ಈಗ ಹೊಸದಾಗಿ ನೀಡುವ ಕಾರ್ ಗೈಡ್ ರೈಲ್ಸ್‌ಗಿಂತ ಸದೃಡವಾಗಿದ್ದು ತುಂಬ ಒಳ್ಳೆಯ ಗುಣಮಟ್ಟದಾಗಿದ್ದು ಈ ರೀತಿ ಕಾರ್ ಗೈಡ್ ರೈಲ್ಸ್ ಅನ್ನು ಯಾವುದೇ ಲಿಫ್ಟ್ ಉತ್ಪಾದಿಸುವ ಕಂಪನಿಯವರು ನೀಡುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಲಿ ಇರುವ ಕಾರ್ ಗೈಡ್ ರೈಲ್ಸ್, ಬ್ರಕೇಟ್ಸ್, ಕೌಂಟರ್ ವೈಟ್ ಫ್ರೇಮ್ ಮತ್ತು ಫಿಲ್ಲರ್ ವೈಟ್ಸ್ ಉಪಯೋಗಿಸುವುದರಿಂದ ಹಣ ಉಳಿತಾಯ, ಅಳವಡಿಸುವ ಸಮಯ ಉಳಿತಾಯ ಮತ್ತು ಈಗಾಗಲೇ ಹಾಲಿ ಕಟ್ಟಡ ಉಪಯೋಗದಲ್ಲಿರುವುದರಿಂದ ಸಾರ್ವಜನಿಕರಿಗೆ, ಅಧಿಕಾರಿಗಳಿಗೆ ಹೆಚ್ಚಿನ ತೊಂದರೆ ತಪ್ಪಿಸಬಹುದೆಂದು ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ.

ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ರವರು FRLS ಕೇಬಲ್ ಮತ್ತು ವೈರ್‌ಗಳು ಉಪಯೋಗಿಸಬೇಕಾದಲ್ಲಿ ರೂ.6,54,000.00 ಗಳನ್ನು ಹೆಚ್ಚಿಗೆ ನೀಡಬೇಕೆಂದು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆ. ಈ ರೀತಿ ಕೇಬಲ್‌ಗಳನ್ನು ಪೆಟ್ರೋಲಿಯಂ ಉತ್ಪಾದನಾ ಸಂಸ್ಥೆಗಳಲ್ಲಿ, ರಾಕೇಟ್ ಲಾಂಚರ್ ಸ್ಥಳಗಳಲ್ಲಿ ಮತ್ತು ಹೆಚ್ಚಿನ ಬೆಂಕಿ ಅಪಘಾತ ಸ್ಥಳಗಳಲ್ಲಿ ಉಪಯೋಗಿಸುತ್ತಾರೆ ಎಂದು ತಿಳಿಸಿದ್ದು, ಇಂತಹ ವಾಣಿಜ್ಯ ಸ್ಥಳಗಳಲ್ಲಿ ಇದರ ಅವಶ್ಯಕತೆ ಇಲ್ಲವೆಂದು ಪತ್ರದಲ್ಲಿ ತಿಳಿಸಿರುವುದಾಗಿ ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ.

. . . 2

ಗುತ್ತಿಗೆದಾರ ಸಂಸ್ಥೆಯಾದ ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ರವರು ನಮೂದಿಸಿರುವ ಬಿಡ್ ಮೊತ್ತವಾದ ರೂ.1,00,92,000.00 ಅಂದಾಜು ಪಟ್ಟಿಯ ಮೊತ್ತಕ್ಕಿಂತ ರೂ.10,92,000.00 ಗಳು ಹೆಚ್ಚಿಗೆ ಇದ್ದು ಸದರಿ ದರದಲ್ಲಿ ಮೂರು ವರ್ಷಗಳ ವಾರ್ಷಿಕ ನಿರ್ವಹಣೆಯನ್ನು ಸೇರಿಸಲಾಗಿದ್ದು, ಸದರಿ ಮೂರು ವರ್ಷಗಳ ವಾರ್ಷಿಕ ನಿರ್ವಹಣೆಯ ಮೊತ್ತವನ್ನು ಕಳೆದಾಗ ಕೇವಲ ಲಿಫ್ಟ್‌ಗಳನ್ನು ಅಳವಡಿಸಲು ಒಟ್ಟು ರೂ.89.62,000.00 ಗಳಾಗಲಿದ್ದು ಇದು ಅಂದಾಜು ಪಟ್ಟಿಯ ಮೊತ್ತದೊಳಗೆ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ. ಸದರಿ ಹೆಚ್ಚಿನ ಆರ್ಥಿಕ ಹೊರೆಯನ್ನು 2008–09ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಭರಿಸಲು ಕ್ರಮ ತೆಗೆದುಕೊಳ್ಳಲು ಕಾರ್ಯಪಾಲಕ ಅಭಿಯಂತರರವರಿಗೆ ನಿರ್ದೇಶನ ನೀಡಬಹುದಾಗಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದೆಇಸಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರವರು ಟೆಂಡರ್ ಕರೆದಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,00,92,000.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ:24–01–2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು, 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು / ಆಡಳಿತಗಾರರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರ ಸಂಸ್ಥೆಯಾದ ಮೆ॥ ಕೋನೆ ಎಲಿವೇಟರ್ಸ್ ಇಂಡಿಯಾ ಲಿಮಿಟೆಡ್ ರವರು ಅಂದಾಜು ಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಅಂದಾಜಿಗಿಂತ ಶೇಕಡ 14.36 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,00,92,000.00 (ರೂ. ಒಂದು ಕೋಟಿ ತೊಂಬತ್ತೆರಡು ಸಾವಿರಗಳು ಮಾತ್ರ) ಗಳ ಟೆಂಡರ್ ಅನುಮೋದನೆ ಹಾಗೂ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 90.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಈಗಾಗಲೇ ಕಾರ್ಯಪಾಲಕ ಅಭಿಯಂತರವರು ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಪುಷ್ಟೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17/03/2008ರ ಟಿಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ:17/03/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯ ಸಂಖ್ಯೆ:225/08-09**

ರಾಮಮೂರ್ತಿನಗರ ವ್ಯಾಪ್ತಿಯಲ್ಲಿ ರಾಮಮೂರ್ತಿನಗರ ಮುಖ್ಯರಸ್ತೆಯಿಂದ "ಸಿತಾರ್ ರಕ್ಷಣಾ ಕಛೇರಿ" ವರೆಗೆ ಕೆ.ಆರ್.ಪುರಂ ರೈಲ್ವೆ ನಿಲ್ದಾಣದ ಹತ್ತಿರ ಜೂಬ್ಲಿ ಶಾಲೆ ಮುಖಾಂತರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ರಾಮಮೂರ್ತಿನಗರ ವ್ಯಾಪ್ತಿಯಲ್ಲಿ ರಾಮಮೂರ್ತಿನಗರ ಮುಖ್ಯರಸ್ತೆಯಿಂದ "ಸಿತಾರ್ ರಕ್ಷಣಾ ಕಛೇರಿ" ವರೆಗೆ ಕೆ.ಆರ್.ಪುರಂ ರೈಲ್ವೆ ನಿಲ್ದಾಣದ ಹತ್ತಿರ ಜೂಬ್ಲಿ ಶಾಲೆ ಮುಖಾಂತರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ತಪಾಸಣೆ ಸಮಯದಲ್ಲಿ ಕೈಗೊಳ್ಳಲು ಆದೇಶಿಸಿರುವ ಮೇರೆಗೆ, ಮಹದೇವಪುರ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು 2007-08ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಎಸ್.ಆರ್. ದರಗಳ ಮೇಲೆ ರೂ.99.60 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯ ವೆಚ್ಚವನ್ನು ವಿಶೇಷ ಅನುದಾನದ ಅಡಿಯಲ್ಲಿ ಭರಿಸಬಹುದಾಗಿದ್ದು, ಕಾಮಗಾರಿಗೆ ಸಂಕೇತವನ್ನು ಸಹ ನೀಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಅಂದಾಜುಪಟ್ಟಿ ರೂ.99.60 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯ ಸಂಖ್ಯೆ:226/08-09**

ಆನಂದನಗರದಲ್ಲಿ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಆನಂದನಗರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಲಘು ವಾಹನ ಸಂಚಾರಕ್ಕೆ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮಾರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನಲೆಯಲ್ಲಿ ರೂ.1,87,500.00 ಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.29.00 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರೆ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದೆ ಹಾಗೂ ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜುಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜುಪಟ್ಟಿಯಲ್ಲಿ ಅನುಮೋದಿತ ದರಗಳನ್ನು ಅಳವಡಿಸಿಕೊಳ್ಳಲಾಗಿದೆ ಹಾಗೂ M/s.TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s.TATA BP SOLAR India Limited ರವರು ನಿಗಧಿಪಡಿಸಿರುವ ಸರಕುದಾರರಾದ M/s.LSS Renewable energy company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಆನಂದನಗರದಲ್ಲಿ ನಿರ್ಮಿಸಿರುವ ಸುರಂಗಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s.LSS Renewable energy company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

ವಿಷಯ ಸಂಖ್ಯೆ:228/2008-09

Providing HPSV lighting from Yelahanka Police Station to M.S. Palya (Laksmi Enterprises) ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Providing HPSV lighting from Yelahanka Police Station to M.S. Palya (Laksmi Enterprises) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪೂರ್ವ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 03 ಟೆಂಡರ್‌ಗಳು ಸ್ವೀಕೃತವಾಗಿದ್ದು, ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿದ್ದ ಟೆಂಡರ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪೂರ್ವ) ರವರು ಕನಿಷ್ಠ ಟೆಂಡರ್‌ದಾರರಾದ ಸಂಸ್ಥೆಯಾದ ಮೆ॥ವೇದಾ ಎಲೆಕ್ಟ್ರಿಕಲ್ಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.97.01 ಲಕ್ಷಗಳ ಹೊಸ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಯಲಹಂಕ ಪೋಲಿಸ್ ಠಾಣೆಯಿಂದ ಎಂ.ಎಸ್.ಪಾಳ್ಯ (ಲಕ್ಷ್ಮಿ ಎಂಟರ್ ಪ್ರೈಸಸ್) ರವರೆಗೆ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ಲೋಕೋಪಯೋಗಿ ಎಸ್.ಆರ್. ದರಗಳು ಮತ್ತು ಬೆಸ್ಕಾಂ ದರಗಳ ಆಧಾರದ ಮೇಲೆ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.93,33,582.00/- ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಸಂಸ್ಥೆಯಾದ ಮೆ॥ ವೇದಾ ಎಲೆಕ್ಟ್ರಿಕಲ್ಸ್, ರವರು ಶೇಕಡ.18% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ಆದುದರಿಂದ ಸದರಿ ಟೆಂಡರ್ ಅನ್ನು ಅನುಮೋದಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಪೂರ್ವ) ರವರು ಅನುಮೋದಿಸಲು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಕಾಮಗಾರಿಯು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನಿರೀಕ್ಷಿಸಿ, ಕಾಯಪಾಲಕ ಅಭಿಯಂತರರು (ವಿದ್ಯುತ್-ಪೂರ್ವ) ರವರು ಟೆಂಡರ್ ಕರೆದಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.76,53,537.00/- ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ3ಇ/116/ಎಸ್‌ಎಫ್‌ಸಿ/2002 ದಿನಾಂಕ: 24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಸಂಸ್ಥೆಯಾದ ಮೆ॥ ವೇದಾ ಎಲೆಕ್ಟ್ರಿಕಲ್ಸ್,ರವರು 2007-08ನೇ ಸಾಲಿನ ವಿದ್ಯುತ್ ದರಪಟ್ಟಿಯ ಮೇಲೆ ನಮೂದಿಸಿದ ದರಗಳಾದ ಶೇಕಡ. 18% ಕಡಿಮೆ ದರಗಳು ಅಥವಾ ರೂ.76,53,537.00/- (ರೂ.ಎಪ್ಪತ್ತಾರು ಲಕ್ಷದ ಐವತ್ಮೂರು ಸಾವಿರ ಐದುನೂರ ಮೂವತ್ತೇಳು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06/06/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:06/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:217/2008-09**

Asphalting to Ring Road from Mysore Road junction to Silk Board junction via J.P. Nagar. BTM Layout Ch:1.70 to 3.50 Km left side Carriageway ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road junction to Silk Board junction via J.P. Nagar. BTM Layout Ch:1.70 to 3.50 Km left side Carriageway ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ದಿನಾಂಕ:07/03/2008 ರಂದು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎ.ಮುನಿರೆಡ್ಡಿ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.75 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.99,66,951.29 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು ಶೇಕಡ 42.29% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ [illegible]% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ 14.44% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,33,25,030.90 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ:24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎ.ಮುನಿರೆಡ್ಡಿ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.44% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,33,25,030.90 (ರೂ.ಒಂದು ಕೋಟಿ ಮೂವತ್ಮೂರು ಲಕ್ಷದ ಇಪ್ಪತ್ತೈದು ಸಾವಿರದ ಮೂವತ್ತು ರೂಪಾಯಿ ಮತ್ತು ಪೈಸೆ ತೊಂಬತ್ತು ಮಾತ್ರ) ಗಳ ಟೆಂಡರ್ ಅನುಮೋದಿಸಲು ಮತ್ತು ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.99.75 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:215/2008-09**

ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ರವರಿಗೆ ಅನುದಾನ/ಸಹಾಯಧನ ಮಾಡುವ ಬಗ್ಗೆ.

**ಪ್ರಸ್ತಾವನೆ:**

ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ನಂ.538/2, ರಾಜು ಕಾಂಪ್ಲೆಕ್ಸ್, 2ನೇ ಮಹಡಿ, ಸಂಪಿಗೆ ರಸ್ತೆ, ಸಂಪಿಗೆ ಟಾಕೀಸ್ ಬಳಿ, ಮಲ್ಲೇಶ್ವರಂ, ಬೆಂಗಳೂರು ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ವಿದ್ಯಾಭ್ಯಾಸ ಮುಗಿಸಿ ನಿರುದ್ಯೋಗಿಗಳಾಗಿರುವರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ, ಅಂಗವಿಕಲರಿಗೆ, ಮಹಿಳೆಯರಿಗೆ ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮತ್ತು ಉದ್ಯೋಗ ಅವಲಂಬಿತರಿಗೆ ಕನ್ನಡ ಕಂಪ್ಯೂಟರ್ ತಂತ್ರಜ್ಞಾನ ಶಿಕ್ಷಣ ದೊರಕಿಸಿಕೊಡಲು ಸ್ಥಾಪಿತವಾಗಿರುವ ಮತ್ತು ಯಶಸ್ವಿಯಾಗಿ ಕಾರ್ಯನಿರತವಾಗಿರುವ, ಕರ್ನಾಟಕದಲ್ಲಿಯೇ ಪ್ರಪ್ರಥಮವಾದ "ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ" ವೆಂದು, ಕಂಪ್ಯೂಟರ್ ಯಂತ್ರಗಳ ಶಿಕ್ಷಣಕ್ಕೆ ಅವಶ್ಯವಾಗಿ ಬೇಕಾಗಿರುವ ಇತರೆ ಪರಿಕರಗಳೊಂದಿಗೆ ಕನ್ನಡ ಭಾಷೆಯಲ್ಲಿ ತರಗತಿಗಳನ್ನು ನಡೆಸಲಾಗುತ್ತಿದ್ದು, ಈಗಾಗಲೇ ನೂರಾರು ಅಭ್ಯರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಮತ್ತು ಪಡೆಯುತ್ತಿದ್ದಾರೆಂದು, ಈ ಕೇಂದ್ರದ ನಿರ್ವಹಣೆಗೆ ವಾರ್ಷಿಕ ರೂ.20.00 ಲಕ್ಷಗಳ ವೆಚ್ಚವಾಗಲಿದೆಯೆಂದು, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ವಿಶೇಷ ಪ್ರಕರಣವನ್ನಾಗಿ ಪರಿಗಣಿಸಿ ಪಾಲಿಕೆ ವತಿಯಿಂದ ರೂ.10.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾಪಿತ ಸಂಸ್ಥೆಗೆ 2006-07ನೇ ಸಾಲಿನಲ್ಲಿ ರೂ.40,000=00 ಗಳ ಅನುದಾನ ಮಂಜೂರಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಆಡಳಿತಗಾರರವರ ಗಮನಕ್ಕೆ ತರುತ್ತಾ, ಪ್ರಸ್ತಾಪಿತ ಸಂಸ್ಥೆಯವರ ಕಾರ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2008-09 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 24, ಸಂಸ್ಕೃತಿ ಮತ್ತು ಕ್ರೀಡೆ, ಕೊಡುಗೆ ಮತ್ತು ಸಹಾಯ ಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಿರುವ ರೂ.300.00 ಲಕ್ಷಗಳ ಅನುದಾನದಲ್ಲಿ, ರೂ.50,000=00 ಗಳ ಅನುದಾನವನ್ನು ಪ್ರಸ್ತಾವಿಕ ಸಂಸ್ಥೆಗೆ 2008-09ನೇ ಸಾಲಿಗೆ ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:218/2008-09**

Asphalting to Ring Road from Mysore Road junction to Silk Board junction via J.P. Nagar, BTM Layout Ch:0.00 to 1.70 Km left side Carriageway ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road junction to Silk Board junction via J.P. Nagar, BTM Layout Ch:0.00 to 1.70 Km left side Carriageway ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ದಿನಾಂಕ:07/03/2008 ರಂದು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಆರ್.ಲೋಕೇಶ್ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.98,54,193.01 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಆರ್.ಲೋಕೇಶ್ ರವರು ಶೇಕಡ 43.13% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 35.41% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ 14.46% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,33,43,686.90 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ:24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 8 ಕ್ಕೆ ಅಧೀನ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಆರ್.ಲೋಕೇಶ್ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.46% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,33,43,686.90 (ರೂ.ಒಂದು ಕೋಟಿ ಮೂವತ್ತ್ಮೂರು ಲಕ್ಷದ ನಲವತ್ತ್ಮೂರು ಸಾವಿರದ ಆರುನೂರು ಎಂಭತ್ತಾರು ಮತ್ತು ಪೈಸೆ ತೊಂಭತ್ತು ಮಾತ್ರ) ಗಳ ಟೆಂಡರ್ ಅನುಮೋದಿಸಲು ಮತ್ತು ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.99.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:220/2008–09**

WBM and Surfacing of Existing Gravel Roads in Ward No.67 of Bangalore City phase II (Package No.01) (Ward 67A) ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

WBM and Surfacing of Existing Gravel Roads in Ward No.67 of Bangalore City phase II (Package No.01) (Ward 67A) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಮೂರನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ಗಳು ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.83.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.82,83,389.00 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು ಶೇಕಡ 29.97% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ–1) ರವರು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಶೇಕಡ 28.03% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚಿಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಬಿಟುಮಿನ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.37% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆ ಎಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) **ರೂ.1,06,04,816.00** ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:[illegible]/ 2002 ದಿನಾಂಕ: 24–01–2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಮಗಾರಿ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು 2007–08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟ್‌ನ ಮತ್ತು ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ **14.37%** ರಷ್ಟು ಹೆಚ್ಚುವರಿ ದರಗಳು ಅಥವಾ **ರೂ.1,06,04,816.00** (ರೂ.ಒಂದು ಕೋಟಿ ಆರು ಲಕ್ಷದ ನಾಲ್ಕು ಸಾವಿರದ ಎಂಟುನೂರ ಹದಿನಾರು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:09/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಬೆಂಗಳೂರು ಮಹಾನಗರ ಪಾಲಿಕೆ**

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯ ಸಂಖ್ಯೆ:222/08-09**

WBM and surfacing of Existing Gravel roads in Ward No.67 of Bangalore City Phase II (Package No.02) (Ward No.67B)

**ಪ್ರಸ್ತಾವನೆ:**

WBM and surfacing of Existing Gravel roads in Ward No.67 of Bangalore City Phase II (Package No.02) (Ward No.67B) ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-I) ರವರು ನಾಲ್ಕನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-1) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಜಿ.ಮುಕುಂದ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.83.24 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08 ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.83,58,285.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಜಿ.ಮುಕುಂದ ರವರು ಶೇಕಡ 53.66% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-I) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 22.01% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.48% ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿದ್ದು, ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,01,54,808.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರವರು/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಜಿ.ಮುಕುಂದ ರವರು 2007–08 ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಡಾಂಬರಿನ ವ್ಯತ್ಯಾಸದ ದರವನ್ನು ಪರಿಗಣಿಸಿ ಬಂದಂತಹ ಶೇಕಡ 14.48 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,01,54,808.00 (ರೂ.ಒಂದು ಕೋಟಿ ಒಂದು ಲಕ್ಷದ ಐವತ್ತ್ನಾಲ್ಕು ಸಾವಿರದ ಎಂಟು ನೂರ ಎಂಟು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/06/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:09/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು